Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**
ವಿಶೇಷ ಸಂಚಿಕೆ

भाग—IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं—1 | नई दिल्ली सोमवार, डिसेम्बर 15, 1986 | मार्गशिर 24, 1908 (शक) | खण्ड—5 |
| No. 1 | New Delhi Monday, December 15, 1986 | Margashira 24, 1908 (Saka) | Vol. 5 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಡಿಸೆಂಬರ್ ೧೫, ೧೯೮೬ | ಮಾರ್ಗಶಿರ ೨೪, ೧೯೦೮ (ಶಕ) | ಸಂಪುಟ ೫ |


## MINISTRY OF LAW AND JUSTICE

(Legislative Department)

New Delhi, October 9, 1986/Ashwayuja 17, 1908 (Saka)

The translations in Kannada of the following namely— (1) The Societies Registration Act, 1860 (2) The Local Authorities Loans Act, 1914 (3) The Commercial Documents Evidence Act, 1939 (4) The Industrial Disputes (Banking and Insurance Companies) Act, 1949 (5) The Commissions of Inquiry Act, 1952 (6) The Employment Exchanges (Compulsory Notification of Vacancies) Act, 1959–are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಸೊಸೈಟಿ ನೋಂದಣಿ ಅಧಿನಿಯಮ, ೧೮೬೦ (೨) ಸ್ಥಳೀಯ ಪ್ರಾಧಿಕಾರಗಳ ಸಾಲಗಳ ಅಧಿನಿಯಮ, ೧೯೧೪ (೩) ವಾಣಿಜ್ಯ ದಸ್ತಾವೇಜು ಸಾಕ್ಷ್ಯ ಅಧಿನಿಯಮ, ೧೯೩೯ (೪) ಔದ್ಯಮಿಕ ವಿವಾದ (ಬ್ಯಾಂಕಿಂಗ್ ಮತ್ತು ವಿಮಾ ಕಂಪನಿ) ಅಧಿನಿಯಮ, ೧೯೪೯ (೫) ವಿಚಾರಣಾ ಆಯೋಗ ಅಧಿನಿಯಮ, ೧೯೫೨ (೬) ಉದ್ಯೋಗ ವಿನಿಮಯ ಕಛೇರಿಗಳ (ಖಾಲಿ ಸ್ಥಾನಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮ, ೧೯೫೯.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ವಿಚಾರಣಾ ಆಯೋಗ ಅಧಿನಿಯಮ, 1952

## (1952 ರ ಅಧಿನಿಯಮ ಸಂಖ್ಯೆ 60)

[14 ನೇ ಆಗಸ್ಟ್, 1952]

ವಿಚಾರಣಾ ಆಯೋಗಗಳನ್ನು ನೇಮಿಸುವುದಕ್ಕಾಗಿ ಮತ್ತು ಅಂಥ ಆಯೋಗಗಳಲ್ಲಿ ಕೆಲವು ಅಧಿಕಾರಗಳನ್ನು ನಿಹಿತಗೊಳಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:—

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:—ಈ ಅಧಿನಿಯಮವನ್ನು ವಿಚಾರಣಾ ಆಯೋಗ ಅಧಿನಿಯಮ, 1952 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

ಪರಂತು, ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂವಿಧಾನದ ಏಳನೇ ಅನುಸೂಚಿಯಲ್ಲಿರುವ I ನೇ ಪಟ್ಟಿಯಲ್ಲಿ ಅಥವಾ III ನೇ ಪಟ್ಟಿಯಲ್ಲಿ ಆ ರಾಜ್ಯಕ್ಕೆ ಅನ್ವಯಿಸುವಂತೆ ಪರಿಗಣಿಸಲಾಗಿರುವ ಯಾವುದೇ ನಮೂದನೆಗೆ ಸಂಬಂಧಿಸಿದ ವಿಷಯಗಳ ವಿಚಾರಣೆಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ಮಾತ್ರ ಅನ್ವಯಿಸತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಸರ್ಕಾರಿ ರಾಜಪತ್ರದಲ್ಲಿ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು:—ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,—

(ಕ) "ಸಮುಚಿತ ಸರ್ಕಾರ" ಎಂದರೆ:—

(i) ಸಂವಿಧಾನದ ಏಳನೇ ಅನುಸೂಚಿಯಲ್ಲಿರುವ I ನೇ ಪಟ್ಟಿ ಅಥವಾ II ನೇ ಪಟ್ಟಿ ಅಥವಾ III ನೇ ಪಟ್ಟಿಯಲ್ಲಿ ಪರಿಗಣಿಸಲಾದ ಯಾವುದೇ ನಮೂದನೆಗೆ ಸಂಬಂಧಿಸುವ ಯಾವುದೇ ವಿಷಯದ ಬಗ್ಗೆ ವಿಚಾರಣೆಯನ್ನು ನಡೆಸುವುದಕ್ಕೆ ಕೇಂದ್ರ ಸರ್ಕಾರವು ನೇಮಕ ಮಾಡಿದ ಆಯೋಗದ ಸಂಬಂಧದಲ್ಲಿ ಆ ಸರ್ಕಾರ; ಮತ್ತು

(ii) ಸಂವಿಧಾನದ ಏಳನೇ ಅನುಸೂಚಿಯಲ್ಲಿರುವ II ನೇ ಪಟ್ಟಿ ಅಥವಾ III ನೇ ಪಟ್ಟಿಯಲ್ಲಿ ಪರಿಗಣಿಸಲಾದ ಯಾವುದೇ ನಮೂದನೆಗೆ ಸಂಬಂಧಿಸುವ ಯಾವುದೇ ವಿಷಯದ ಬಗ್ಗೆ ವಿಚಾರಣೆಯನ್ನು ನಡೆಸುವುದಕ್ಕೆ ರಾಜ್ಯ ಸರ್ಕಾರವು ನೇಮಕ ಮಾಡಿದ ಆಯೋಗದ ಸಂಬಂಧದಲ್ಲಿ, ಆ ಸರ್ಕಾರ:

ಪರಂತು ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸಂಬಂಧದಲ್ಲಿ ಈ ಖಂಡಗಳು ಈ ಕೆಳಕಂಡ ಮಾರ್ಪಾಟಿಗೆ ಒಳಪಟ್ಟು ಪರಿಣಾಮಕಾರಿಯಾಗಿರತಕ್ಕದ್ದು; ಎಂದರೆ:—

(ಕ) ಅದರಲ್ಲಿನ (i) ನೇ ಉಪಖಂಡದಲ್ಲಿ, "ಸಂವಿಧಾನದ ಏಳನೇ ಅನುಸೂಚಿಯಲ್ಲಿರುವ I ನೇ ಪಟ್ಟಿ ಅಥವಾ II ನೇ ಪಟ್ಟಿ ಅಥವಾ III ನೇ ಪಟ್ಟಿಯಲ್ಲಿ" ಎಂಬ ಪದಗಳು ಮತ್ತು ಅಂಕಿಗಳಿಗೆ ಬದಲಾಗಿ, "ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯಿಸುವಂತೆ ಸಂವಿಧಾನದ ಏಳನೇ ಅನುಸೂಚಿಯಲ್ಲಿರುವ Iನೇ ಪಟ್ಟಿ ಅಥವಾ IIIನೇ ಪಟ್ಟಿಯಲ್ಲಿ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಖ) ಅದರಲ್ಲಿನ (ii)ನೇ ಉಪಖಂಡದಲ್ಲಿ "ಸಂವಿಧಾನದ ಏಳನೇ ಅನುಸೂಚಿಯಲ್ಲಿರುವ II ನೇ ಪಟ್ಟಿ ಅಥವಾ III ನೇ ಪಟ್ಟಿಯಲ್ಲಿ" ಎಂಬ ಪದಗಳು ಮತ್ತು ಅಂಕಿಗಳಿಗೆ ಬದಲಾಗಿ. "ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯಿಸುವಂತೆ ಸಂವಿಧಾನದ ಏಳನೇ ಅನುಸೂಚಿಯಲ್ಲಿರುವ III ನೇ ಪಟ್ಟಿಯಲ್ಲಿ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಖ) "ಆಯೋಗ" ಎಂದರೆ 3 ನೇ ಪ್ರಕರಣದ ಮೇರೆಗೆ ನೇಮಕವಾದ ವಿಚಾರಣಾ ಆಯೋಗ;

(ಗ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು.

(2ಕ) ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿಲ್ಲದಂಥ ಕಾನೂನುಗಳನ್ನು ಕುರಿತ ಉಲ್ಲೇಖಗಳ ಅರ್ಥಾನ್ವಯ.—ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿಲ್ಲದ ಕಾನೂನನ್ನು ಕುರಿತ ಈ ಅಧಿನಿಯಮದಲ್ಲಿನ ಯಾವುದೇ ಉಲ್ಲೇಖವು, ಆ ರಾಜ್ಯಕ್ಕೆ ಸಂಬಂಧಪಟ್ಟಂತೆ, ಆ ರಾಜ್ಯದಲ್ಲಿ ಜಾರಿಯಲ್ಲಿರುವ ಅದಕ್ಕೆ ಸಂವಾದಿಯಾದ ಕಾನೂನು ಯಾವುದಾದರೂ ಇದ್ದರೆ, ಅದನ್ನು ಕುರಿತ ಉಲ್ಲೇಖವೆಂದು ಅರ್ಥಾನ್ವಯ ಮಾಡತಕ್ಕದ್ದು.

3. ಆಯೋಗದ ನೇಮಕ : ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಯಾವುದೇ ಸಾರ್ವಜನಿಕ ಮಹತ್ವದ ನಿಶ್ಚಿತ ವಿಷಯದ ಬಗ್ಗೆ ವಿಚಾರಣೆ ನಡೆಸುವ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ, ಸಮುಚಿತ ಸರ್ಕಾರವು, ಹಾಗೆ ಮಾಡುವುದು ಆವಶ್ಯವೆಂದು ಅಭಿಪ್ರಾಯಪಟ್ಟರೆ ವಿಚಾರಣಾ ಆಯೋಗವನ್ನು ನೇಮಿಸಬಹುದು ಮತ್ತು ಆ ಬಗ್ಗೆ ಲೋಕಸಭೆಯು ಅಥವಾ ಸಂದರ್ಭಾನುಸಾರ ರಾಜ್ಯವಿಧಾನ ಸಭೆಯು ನಿರ್ಣಯ ಮಾಡಿದರೆ, ಹಾಗೆ ಅದನ್ನು ನೇಮಿಸತಕ್ಕದ್ದು, ಮತ್ತು ಹಾಗೆ ನೇಮಿಸಲಾದ ಆಯೋಗವು ತದನುಸಾರವಾಗಿ ವಿಚಾರಣೆಯನ್ನು ಮಾಡತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು :

ಪರಂತು, ಯಾವುದೇ ವಿಷಯದ ಬಗ್ಗೆ ವಿಚಾರಣೆ ನಡೆಸುವುದಕ್ಕಾಗಿ ಅಂಥ ಆಯೋಗವನ್ನು;—

(ಕ) ಕೇಂದ್ರ ಸರ್ಕಾರವು ನೇಮಕ ಮಾಡಿರುವಲ್ಲಿ, ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆದ ಹೊರತು, ಕೇಂದ್ರ ಸರ್ಕಾರವು ನೇಮಕ ಮಾಡಿರುವ ಆಯೋಗವು ಕಾರ್ಯನಿರ್ವಹಿಸುತ್ತಿರುವವರೆಗೆ ಅದೇ ವಿಷಯದ ವಿಚಾರಣೆ ಮಾಡುವುದಕ್ಕಾಗಿ ಯಾವುದೇ ರಾಜ್ಯ ಸರ್ಕಾರವು ಇನ್ನೊಂದು ಆಯೋಗವನ್ನು ನೇಮಿಸತಕ್ಕದ್ದಲ್ಲ.

(ಖ) ರಾಜ್ಯ ಸರ್ಕಾರವು ನೇಮಕ ಮಾಡಿರುವಲ್ಲಿ, ವಿಚಾರಣಾ ವ್ಯಾಪ್ತಿಯನ್ನು ಎರಡು ಅಥವಾ ಹೆಚ್ಚಿನ ರಾಜ್ಯಗಳಿಗೆ ವಿಸ್ತರಿಸತಕ್ಕದೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟ ಹೊರತು, ರಾಜ್ಯ ಸರ್ಕಾರವು ನೇಮಕ ಮಾಡಿರುವ ಆಯೋಗವು ಕಾರ್ಯನಿರ್ವಹಿಸುತ್ತಿರುವವರೆಗೆ, ಅದೇ ವಿಷಯದ ವಿಚಾರಣೆ ಮಾಡುವುದಕ್ಕಾಗಿ ಕೇಂದ್ರ ಸರ್ಕಾರವು ಇನ್ನೊಂದು ಆಯೋಗವನ್ನು ನೇಮಿಸತಕ್ಕದಲ್ಲ.

(2) ಆಯೋಗವು ಸಮುಚಿತ ಸರ್ಕಾರದಿಂದ ನೇಮಕ ಮಾಡಲಾದ ಒಬ್ಬರು ಅಥವಾ ಹೆಚ್ಚಿನ ಸದಸ್ಯರಿಂದ ಕೂಡಿರಬಹುದು, ಮತ್ತು ಆಯೋಗವು ಒಬ್ಬನಿಗಿಂತ ಹೆಚ್ಚು ಸದಸ್ಯರನ್ನು ಹೊಂದಿರುವಲ್ಲಿ, ಅವರ ಪೈಕಿ ಒಬ್ಬನನ್ನು ಅದರ ಅಧ್ಯಕ್ಷನನ್ನಾಗಿ ನೇಮಿಸಬಹುದು.

(3) ಸಮುಚಿತ ಸರ್ಕಾರವು, ಆಯೋಗವು ನಡೆಸುತ್ತಿರುವ ವಿಚಾರಣೆಯ ಯಾವುದೇ ಹಂತದಲ್ಲಿ, (ಒಬ್ಬ ಅಥವಾ ಒಬ್ಬನಿಗಿಂತ ಹೆಚ್ಚು ಸದಸ್ಯರನ್ನು ಒಳಗೊಂಡಿರುವ) ಆಯೋಗದ ಸದಸ್ಯನ ಪದದಲ್ಲಿ ಉಂಟಾಗಿರಬಹುದಾದ ಯಾವುದೇ ಖಾಲಿಯಾದ ಸ್ಥಾನವನ್ನು ತುಂಬಬಹುದು.

(4) (1)ನೇ ಉಪಪ್ರಕರಣದ ಮೇರೆಗೆ ಆಯೋಗವು ನಡೆಸಿದ ವಿಚಾರಣೆಯ ಬಗ್ಗೆ ಆಯೋಗದ ವರದಿ, ಯಾವುದಾದರೂ ಇದ್ದರೆ, ಅದನ್ನು ಅದರ ಮೇಲೆ ಕೈಗೊಳ್ಳಲಾದ ಕ್ರಮದ ಬಗೆಗಿನ ವಿವರ ಪತ್ರದೊಡನೆ ಆಯೋಗವು ಸಮುಚಿತ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಿದ ಆರು ತಿಂಗಳುಗಳ ಅವಧಿಯೊಳಗೆ ಸಮುಚಿತ ಸರ್ಕಾರವು ಲೋಕಸಭೆಯ ಮುಂದೆ ಅಥವಾ ಸಂದರ್ಭಾನುಸಾರ, ರಾಜ್ಯದ ವಿಧಾನಸಭೆಯ ಮುಂದೆ ಇಡುವಂತೆ ಮಾಡತಕ್ಕದು.

4. ಆಯೋಗದ ಅಧಿಕಾರಿಗಳು.—ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ದಾವೆಯ ವಿಚಾರಣೆ ಮಾಡುವಾಗ, ಈ ಕೆಳಕಂಡ ವಿಷಯಗಳ ಬಗ್ಗೆ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಆಯೋಗವು ಹೊಂದಿರತಕ್ಕದು, ಎಂದರೆ.—

(ಕ) ಭಾರತದ ಯಾವುದೇ ಭಾಗದಿಂದ ಯಾವನೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಹಾಜರಿಯನ್ನು ಒತ್ತಾಯ ಪಡಿಸುವುದು ಮತ್ತು ಪ್ರಮಾಣದ ಮೇಲೆ ಅವನನ್ನು ವಿಚಾರಣೆ ಮಾಡುವುದು;

(ಖ) ಯಾವುದೇ ದಸ್ತಾವೇಜನ್ನು ಬಹಿರಂಗ ಪಡಿಸುವುದು ಮತ್ತು ಹಾಜರು ಪಡಿಸುವುದನ್ನು ಅಗತ್ಯಪಡಿಸುವುದು;

(ಗ) ಶಪಥಪತ್ರದ ಮೂಲಕ ಸಾಕ್ಷ್ಯವನ್ನು ಪಡೆಯುವುದು;

(ಘ) ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು.

(ಙ) ಸಾಕ್ಷಿಗಳನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕಾಗಿ ಕಮಿಷನುಗಳನ್ನು ಹೊರಡಿಸುವುದು.

(ಚ) ನಿಯಮಿಸಬಹುದಾದ ಇತರ ಯಾವುದೇ ವಿಷಯ :

5. ಆಯೋಗದ ಹೆಚ್ಚಿನ ಅಧಿಕಾರಗಳು.—(1) ಸಮುಚಿತ ಸರ್ಕಾರವು, ಮಾಡಬೇಕಾಗಿರುವ ವಿಚಾರಣೆಯ ಸ್ವರೂಪ ಮತ್ತು ಪ್ರಕರಣದ ಇತರ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು (2)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣ ಅಥವಾ (4)ನೇ ಉಪಪ್ರಕರಣ ಅಥವಾ (5)ನೇ ಉಪಪ್ರಕರಣದ ಎಲ್ಲ ಅಥವಾ ಯಾವುವೇ ಉಪಬಂಧಗಳನ್ನು ಆಯೋಗಕ್ಕೆ ಅನ್ವಯಿಸಬೇಕೆಂದು ಅಭಿಪ್ರಾಯಪಟ್ಟರೆ ಸಮುಚಿತ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸುವ ಮೂಲಕ ಸದರಿ ಎಲ್ಲ ಉಪಬಂಧಗಳು ಅಥವಾ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಉಪಬಂಧಗಳು ಆಯೋಗಕ್ಕೆ ಅನ್ವಯಿಸತಕ್ಕದೆಂದು ಮತ್ತು ಅಂಥ ಅಧಿಸೂಚನೆಯನ್ನು ಹೊರಡಿಸಿದ ಮೇಲೆ ಸದರಿ ಉಪಬಂಧಗಳು ತದನುಸಾರವಾಗಿ ಅನ್ವಯವಾಗತಕ್ಕದೆಂದು ನಿರ್ದೇಶಿಸಬಹುದು.

(2) ಆಯೋಗವು, ಯಾವನೇ ವ್ಯಕ್ತಿಯನ್ನು ಆ ವ್ಯಕ್ತಿಯು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಕ್ಲೇಮು ಮಾಡಬಹುದಾದ ಯಾವುದೇ ವಿಶೇಷ ಹಕ್ಕಿಗೆ ಒಳಪಟ್ಟು, ವಿಚಾರಣಾ ವಿಷಯಕ್ಕೆ ಉಪಯುಕ್ತವೆಂದು ಅಥವಾ ಸುಸಂಬದ್ಧವೆಂದು ಆಯೋಗವು ಅಭಿಪ್ರಾಯಪಡಬಹುದಾದಂಥ ಅಂಶಗಳು ಅಥವಾ ವಿಷಯಗಳ ಬಗ್ಗೆ ಮಾಹಿತಿಯನ್ನು ಒದಗಿಸಬೇಕೆಂದು ಅಗತ್ಯಪಡಿಸುವ ಅಧಿಕಾರವನ್ನು ಹೊಂದಿರತಕ್ಕದು ಮತ್ತು ಹಾಗೆ ಅಗತ್ಯಪಡಿಸಲಾದ ಯಾವನೇ ವ್ಯಕ್ತಿಯು ಭಾರತ ದಂಡ ಸಂಹಿತೆಯ (1860ರ 45) 176ನೇ ಪ್ರಕರಣ ಮತ್ತು 177ನೇ ಪ್ರಕರಣದ ಅರ್ಥದಲ್ಲಿ ಅಂಥ ಮಾಹಿತಿಯನ್ನು ಒದಗಿಸಲು ಕಾನೂನು ಸಮ್ಮತವಾಗಿ ಬದ್ಧನೆಂದು ಭಾವಿಸತಕ್ಕದು.

(3) ಆಯೋಗವು ಅಥವಾ ಈ ಸಂಬಂಧದಲ್ಲಿ ಆಯೋಗದಿಂದ ವಿಶೇಷವಾಗಿ ಅಧಿಕೃತನಾದ ಗೆಜೆಟೆಡ್ ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ಯಾವನೇ ಅಧಿಕಾರಿಯು ವಿಚಾರಣಾ ವಿಷಯಕ್ಕೆ ಸಂಬಂಧಪಟ್ಟ ಯಾವುವೇ ಲೆಕ್ಕದ ಪುಸ್ತಕಗಳು ಅಥವಾ ಇತರ ದಸ್ತಾವೇಜುಗಳು ಸಿಕ್ಕಬಹುದೆಂದು ಆಯೋಗವು ನಂಬುವುದಕ್ಕೆ ಕಾರಣವಿದ್ದರೆ ಯಾವುದೇ ಕಟ್ಟಡ ಅಥವಾ ಸ್ಥಳವನ್ನು ಪ್ರವೇಶಿಸಬಹುದು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1898ರ (1898 ರ5) 102ನೇ ಪ್ರಕರಣ ಮತ್ತು 103ನೇ ಪ್ರಕರಣಗಳ ಉಪಬಂಧಗಳಿಗೆ, ಅವು ಅನ್ವಯವಾಗಬಹುದಾದಷ್ಟರ ಮಟ್ಟಿಗೆ, ಒಳಪಟ್ಟು ಅಂಥ ಯಾವುವೇ ಲೆಕ್ಕದ ಪುಸ್ತಕಗಳು ಅಥವಾ ದಸ್ತಾವೇಜುಗಳನ್ನು ಅಭಿಗ್ರಹಿಸಬಹುದು ಅಥವಾ ಅವುಗಳಿಂದ ಉದ್ಧೃತ ಭಾಗಗಳನ್ನು ಅಥವಾ ಪ್ರತಿಗಳನ್ನು ತೆಗೆದುಕೊಳ್ಳಬಹುದು.

(4) ಆಯೋಗವನ್ನು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದು ಮತ್ತು ಆಯೋಗದ ದೃಷ್ಟಿಯಲ್ಲಿ ಅಥವಾ ಅದರ ಸಮ್ಮುಖದಲ್ಲಿ ಭಾರತ ದಂಡ ಸಂಹಿತೆಯ (1860ರ 45) 175ನೇ ಪ್ರಕರಣ 178ನೇ ಪ್ರಕರಣ, 179ನೇ ಪ್ರಕರಣ, 180ನೇ ಪ್ರಕರಣ ಅಥವಾ 228ನೇ ಪ್ರಕರಣದಲ್ಲಿ, ವಿವರಿಸಲಾಗಿರುವ ಯಾವುದೇ ಅಪರಾಧವನ್ನು ಮಾಡಲಾಗಿದ್ದಲ್ಲಿ, ಆಯೋಗವು ಅಪರಾಧಕ್ಕೆ ಕಾರಣವಾದ ಸಂಗತಿಗಳನ್ನು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರಲ್ಲಿ ಉಪಬಂಧಿಸಿದಂತೆ ಆಪಾದಿತನ ಹೇಳಿಕೆಯನ್ನು ದಾಖಲು ಮಾಡಿಕೊಂಡ ತರುವಾಯ ಮೊಕದ್ದಮೆಯನ್ನು ವಿಚಾರಣೆ ಮಾಡಲು ಅಧಿಕಾರ ವ್ಯಾಪ್ತಿಯಿರುವ ಮ್ಯಾಜಿಸ್ಟ್ರೇಟನಿಗೆ ಅದನ್ನು ಕಳುಹಿಸತಕ್ಕದು ಮತ್ತು ಅಂಥ ಯಾವುದೇ ಮೊಕದ್ದಮೆಯನ್ನು ಯಾವ ಮ್ಯಾಜಿಸ್ಟ್ರೇಟನಿಗೆ ಕಳುಹಿಸಲಾಗಿದೆಯೋ ಅವನು ದಂಡ ಪ್ರಕ್ರಿಯಾ ಸಂಹಿತೆ 1898ರ 482ನೇ ಪ್ರಕರಣದ ಮೇರೆಗೆ ತನಗೆ ಮೊಕದ್ದಮೆಯನ್ನು ಕಳುಹಿಸಲಾಗಿದ್ದರೆ ಹೇಗೋ ಹಾಗೆ ಆಪಾದಿತನ ವಿರುದ್ಧ ಇರುವ ಫಿರ್ಯಾದಿನ ಚುನಾವಣೆ ಮಾಡಲು ಮುಂದುವರಿಯತಕ್ಕದು.

(5) ಆಯೋಗದ ಮುಂದಿರುವ ಯಾವುದೇ ವ್ಯವಹರಣೆಯನ್ನು ಭಾರತ ದಂಡ ಸಂಹಿತೆಯ (1860ರ 45 193 ಮತ್ತು 228ನೇ ಪ್ರಕರಣಗಳ ಅರ್ಥ ವ್ಯಾಪ್ತಿಯಲ್ಲಿ ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು.

5. ವಿಚಾರಣೆಗೆ ಸಂಬಂಧಿಸಿದ ತನಿಖೆಯನ್ನು ನಡೆಸುವುದಕ್ಕಾಗಿ ಕೆಲವು ಅಧಿಕಾರಿಗಳ ಮತ್ತು ತನಿಖಾ ಏಜೆನ್ಸಿಗಳ ಸೇವೆಗಳನು ಉಪಯೋಗಿಸಿಕೊಳ್ಳಲು ಆಯೋಗದ ಅಧಿಕಾರ (1) ಆಯೋಗವು, ವಿಚಾರಣೆಗೆ ಸಂಬಂಧಿಸಿದ ಯಾವುದೇ ತನಿಖೆಯನ್ನು ನಡೆಸುವ ಉದ್ದೇಶಕ್ಕಾಗಿ.—

(ಕ) ಕೇಂದ್ರ ಸರ್ಕಾರದಿಂದ ನೇಮಕವಾದ ಆಯೋಗದ ಸಂದರ್ಭದಲ್ಲಿ, ಸಂದರ್ಭಾನುಸಾರ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಸಹಮತಿಯೊಡನೆ ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಯಾವನೇ ಅಧಿಕಾರಿಯ ಅಥವಾ ತನಿಖಾ ಏಜೆನ್ಸಿಯ, ಅಥವಾ

(ಖ) ರಾಜ್ಯ ಸರ್ಕಾರದಿಂದ ನೇಮಕವಾದ ಆಯೋಗದ ಸಂದರ್ಭದಲ್ಲಿ, ಸಂದರ್ಭಾನುಸಾರ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಸಹಮತಿಯೊಡನೆ, ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಯಾವನೇ ಅಧಿಕಾರಿಯ ಅಥವಾ ತನಿಖಾ ಏಜೆನ್ಸಿಯ,

—ಸೇವೆಗಳನ್ನು ಉಪಯೋಗಿಸಿಕೊಳ್ಳಬಹುದು.

(2) ವಿಚಾರಣೆಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ತನಿಖೆ ನಡೆಸುವ ಉದ್ದೇಶಕ್ಕಾಗಿ (1)ನೇ ಉಪ ಪ್ರಕರಣದ ಮೇರೆಗೆ ಯಾವ ಅಧಿಕಾರಿ ಅಥವಾ ಏಜೆನ್ಸಿಯ ಸೇವೆಗಳನ್ನು ಉಪಯೋಗಿಸಿಕೊಳ್ಳಲಾಗಿದೆಯೋ, ಆ ಅಧಿಕಾರಿ ಅಥವಾ ಏಜೆನ್ಸಿಯು ಆಯೋಗದ ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು,—

(ಕ) ಯಾವನೇ ವ್ಯಕ್ತಿಯನ್ನು ಸಮನು ಮಾಡಬಹುದು ಮತ್ತು ಅವನ ಹಾಜರಿಯನ್ನು ಒತ್ತಾಯಪಡಿಸಬಹುದು ಮತ್ತು ಅವನನ್ನು ವಿಚಾರಣೆ ಮಾಡಬಹುದು,

(ಖ) ಯಾವುದೇ ದಸ್ತಾವೇಜನ್ನು ಬಹಿರಂಗ ಪಡಿಸುವುದನ್ನು ಮತ್ತು ಹಾಜರು ಪಡಿಸುವುದನ್ನು ಅಗತ್ಯಪಡಿಸ ಬಹುದು ಮತ್ತು

(ಗ) ಯಾವುದೇ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರಬಹುದು.

(3) 6ನೇ ಪ್ರಕರಣದ ಉಪಬಂಧಗಳು, ಆಯೋಗದ ಮುಂದೆ ವ್ಯಕ್ತಿಯು ಸಾಕ್ಷ್ಯವನ್ನು ಕೊಡುವ ಕ್ರಮದಲ್ಲಿ ನೀಡಿದ ಹೇಳಿಕೆಯ ಸಂಬಂಧದಲ್ಲಿ ಅವು ಅನ್ವಯವಾಗುವಂತೆಯೇ (1)ನೇ ಉಪಪ್ರಕರಣದ ಮೇರೆಗೆ ಯಾವ ಅಧಿಕಾರಿ ಅಥವಾ ಏಜೆನ್ಸಿಯ ಸೇವೆಗಳನ್ನು ಉಪಯೋಗಿಸಿಗೊಳ್ಳಲಾಗಿದೆಯೋ ಆ ಅಧಿಕಾರಿ ಅಥವಾ ಏಜೆನ್ಸಿಯ ಮುಂದೆ ವ್ಯಕ್ತಿಯು ನೀಡಿದ ಹೇಳಿಕೆಯ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು.

4 (1)ನೇ ಉಪಪ್ರಕರಣದ ಮೇರೆಗೆ ಯಾರ ಸೇವೆಗಳನ್ನು ಉಪಯೋಗಿಸಿಕೊಳ್ಳಲಾಗಿದೆಯೋ ಆ ಅಧಿಕಾರಿ ಅಥವಾ ಏಜೆನ್ಸಿಯು, ವಿಚಾರಣೆಗೆ ಸಂಬಂಧಪಟ್ಟ ಯಾವುದೇ ವಿಷಯದ ಬಗ್ಗೆ ತನಿಖೆ ನಡೆಸತಕ್ಕದ್ದು ಮತ್ತು ಅದರ ಮೇಲೆ ಆಯೋಗವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದ ಅವಧಿಯೊಳಗಾಗಿ ಆಯೋಗಕ್ಕೆ (ಇನ್ನು ಮುಂದೆ ಈ ಪ್ರಕರಣದಲ್ಲಿ ತನಿಖಾ ವರದಿಯೆಂದು ಉಲ್ಲಿಖಿತವಾಗುವ) ವರದಿಯನ್ನು ಸಲ್ಲಿಸತಕ್ಕದ್ದು.

(5) ಆಯೋಗವು (4)ನೇ ಉಪಪ್ರಕರಣದ ಮೇರೆಗೆ ಒಪ್ಪಿಸಲಾದ ವಿಚಾರಣಾ ವರದಿಯಲ್ಲಿ ಹೇಳಿದ ಸಂಗತಿಗಳು ಮತ್ತು ಕೈಕೊಂಡ ನಿರ್ಣಯಗಳು ಯಾವುವಾದರೂ ಇದ್ದರೆ. ಅವುಗಳ ಸರಿತನದ ಬಗ್ಗೆ ಮನವರಿಕೆ ಮಾಡಿಕೊಳ್ಳತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಆಯೋಗವು ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು (ತನಿಖೆ ನಡೆಸಿದ ಮತ್ತು ತನಿಖೆಯಲ್ಲಿ ಸಹಾಯ ಮಾಡಿದ ವ್ಯಕ್ತಿ ಅಥವಾ ವ್ಯಕ್ತಿಗಳ ವಿಚಾರಣೆಯನ್ನು ಒಳಗೊಂಡು) ಮಾಡಬಹುದು.

6. ಆಯೋಗಕ್ಕೆ ವ್ಯಕ್ತಿಗಳು ನೀಡಿದ ಹೇಳಿಕೆಗಳು.—ಆಯೋಗದ ಮುಂದೆ ಸಾಕ್ಷ್ಯವನ್ನು ಕೊಡುವ ಕ್ರಮದಲ್ಲಿ ವ್ಯಕ್ತಿಯು ನೀಡಿದ ಯಾವುದೇ ಹೇಳಿಕೆಯು ಅವನನ್ನು ಅಂಥ ಹೇಳಿಕೆಯ ಮೂಲಕ ಸುಳ್ಳು ಸಾಕ್ಷ್ಯವನ್ನು ಕೊಟ್ಟಿದ್ದಕ್ಕಾಗಿ ಪ್ರಾಸಿಕ್ಯೂಷನ್ ಹೊರತು ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗೆ ಗುರಿಪಡಿಸತಕ್ಕದ್ದಲ್ಲ ಅಥವಾ ಅದನ್ನು ಅವನ ವಿರುದ್ಧವಾಗಿ ಬಳಸಿಕೊಳ್ಳತಕ್ಕದ್ದಲ್ಲ.

ಪರಂತು, ಹೇಳಿಕೆಯು:—

(ಕ) ಅವನು ಉತ್ತರಿಸಬೇಕೆಂದು ಆಯೋಗವು ಅಗತ್ಯಪಡಿಸಿರುವ ಪ್ರಶ್ನೆಗೆ ಕೊಟ್ಟ ಉತ್ತರವಾಗಿರಬೇಕು ಅಥವಾ

(ಖ) ವಿಚಾರಣಾ ವಸ್ತು ವಿಷಯಕ್ಕೆ ಸುಸಂಬದ್ಧವಾಗಿರಬೇಕು.

6ಕ. ಕೆಲವು ಸಂದರ್ಭಗಳಲ್ಲಿ ಸರಕುಗಳ ತಯಾರಿಕೆಯ ರಹಸ್ಯ ವಿಧಾನವನ್ನು ಬಹಿರಂಗಪಡಿಸಲು ವ್ಯಕ್ತಿಗಳು ಬಾಧ್ಯರಲ್ಲ.—ಯಾವುವೇ ಸರಕುಗಳ ತಯಾರಿಕೆಯ ವಿಧಾನದ ಬಗ್ಗೆ ವಿಚಾರಣೆ ನಡೆಸಲು ಆಯೋಗಕ್ಕೆ ಸ್ಪಷ್ಟವಾಗಿ ಅಗತ್ಯ ಪಡಿಸಿರುವ ಸಂದರ್ಭಗಳ ಹೊರತು, ಈ ಅಧಿನಿಯಮದಲ್ಲಿರುವುದಾವುದೂ ಅವುಗಳ ತಯಾರಿಕೆಯ ಯಾವುದೇ ರಹಸ್ಯ ವಿಧಾನವನ್ನು ಬಹಿರಂಗಪಡಿಸುವಂತೆ ಆಯೋಗದ ಮುಂದೆ ಸಾಕ್ಷ್ಯ ಕೊಡುವ ಯಾವನೇ ವ್ಯಕ್ತಿಯನ್ನು ಒತ್ತಾಯಪಡಿಸುವುದಾಗಿ ಭಾವಿಸತಕ್ಕದ್ದಲ್ಲ.

7. ಹಾಗೆ ಅಧಿಸೂಚನೆ ನೀಡಿದಾಗ ಆಯೋಗವು ಅಸ್ತಿತ್ವದಲ್ಲಿರುವುದು ನಿಂತು ಹೋಗತಕ್ಕದ್ದು.—

(1) ಸಮುಚಿತ ಸರ್ಕಾರವು,—

(ಕ) ಆಯೋಗದ (ಲೋಕಸಭೆಯು ಅಥವಾ ಸಂದರ್ಭಾನುಸಾರ ರಾಜ್ಯದ ವಿಧಾನಸಭೆಯು ಮಾಡಿದ ನಿರ್ಣಯಕ್ಕೆ ಅನುಸಾರವಾಗಿ ನೇಮಕ ಮಾಡಲಾದ ಆಯೋಗದ ಹೊರತು) ಅಸ್ತಿತ್ವವು ಮುಂದುವರೆಯುವುದು ಅನಾವಶ್ಯಕವೆಂದು ಅಭಿಪ್ರಾಯಪಟ್ಟರೆ, ಅದು ಅಸ್ತಿತ್ವದಲ್ಲಿರುವುದು ನಿಂತು ಹೋಗತಕ್ಕದ್ದು ಎಂದು.

(ಖ) ಲೋಕಸಭೆ ಅಥವಾ ಸಂದರ್ಭಾನುಸಾರ ರಾಜ್ಯ ವಿಧಾನಸಭೆಯು ಮಾಡಿದ ನಿರ್ಣಯಕ್ಕೆ ಅನುಸಾರವಾಗಿ ನೇಮಕ ಮಾಡಲಾದ ಆಯೋಗವು ಮುಂದುವರಿಯತಕ್ಕುದಲ್ಲವೆಂದು ಲೋಕಸಭೆಯು, ಅಥವಾ ಸಂದರ್ಭಾನುಸಾರ, ರಾಜ್ಯ ವಿಧಾನಸಭೆಯು ನಿರ್ಣಯವನ್ನು ಮಾಡಿದರೆ ಆಯೋಗವು ಅಸ್ತಿತ್ವದಲ್ಲಿರುವುದು ನಿಂತು ಹೋಗತಕ್ಕುದು ಎಂದು ;

—ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಘೋಷಿಸಬಹುದು;

(2) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯು ಆಯೋಗವು ಅಸ್ತಿತ್ವದಲ್ಲಿರುವುದು ನಿಂತು ಹೋಗತಕ್ಕ ದಿನಾಂಕವನ್ನು ನಿರ್ದಿಷ್ಟಪಡಿಸತಕ್ಕದು ಮತ್ತು ಅಂಥ ಅಧಿಸೂಚನೆಯನ್ನು ಹೊರಡಿಸಿದ ಮೇಲೆ, ಅದರಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಆಯೋಗವು ಅಸ್ತಿತ್ವದಲ್ಲಿರುವುದು ನಿಂತು ಹೋಗತಕ್ಕುದು.

8. ಆಯೋಗವು ಅನುಸರಿಸಬೇಕಾದ ಪ್ರಕ್ರಿಯೆ.—ಆಯೋಗವು, ಈ ಬಗ್ಗೆ ರಚಿಸಬಹುದಾದ ಯಾವುವೇ ನಿಯಮಗಳಿಗೆ ಒಳಪಟ್ಟು, (ಉಪವೇಶನಗಳ ಸ್ಥಳ ಮತ್ತು ಕಾಲಗಳನ್ನು ನಿಗದಿಪಡಿಸುವುದು ಮತ್ತು ಅದು ಬಹಿರಂಗವಾಗಿ ಅಥವಾ ಖಾಸಗಿಯಾಗಿ ಉಪವೇಶಿಸುವ ತೀರ್ಮಾನವೂ ಸೇರಿದಂತೆ) ತನ್ನದೇ ಆದ ಪ್ರಕ್ರಿಯೆಯನ್ನು ನಿಯಂತ್ರಿಸಲು ಅಧಿಕಾರವನ್ನು ಹೊಂದಿರತಕ್ಕುದು.

8ಕ. ಆಯೋಗದಲ್ಲಿನ ಖಾಲಿಸ್ಥಾನ ಅಥವಾ ಆಯೋಗದ ರಚನೆಯಲ್ಲಿನ ಬದಲಾವಣೆಯ ಕಾರಣದಿಂದಾಗಿ ವಿಚಾರಣೆಗೆ ಅಡ್ಡಿ ಉಂಟಾಗಬಾರದು.—(1) ಇಬ್ಬರು ಅಥವಾ ಹೆಚ್ಚು ಸದಸ್ಯರನ್ನು ಆಯೋಗವು ಒಳಗೊಂಡಿರುವಲ್ಲಿ ಅಧ್ಯಕ್ಷನು ಅಥವಾ ಇತರ ಯಾವನೇ ಸದಸ್ಯನು ಗೈರುಹಾಜರಾಗಿದ್ದರೂ ಅಥವಾ ಸದಸ್ಯರ ಪೈಕಿ ಯಾವುದೇ ಸ್ಥಾನವು ಖಾಲಿ ಇದ್ದರೂ ಅದು ಕೆಲಸವನ್ನು ಮಾಡಬಹುದು.

(2) ಆಯೋಗದ ಮುಂದೆ ವಿಚಾರಣೆ ನಡೆಯುತ್ತಿರುವ ಕಾಲದಲ್ಲಿ, ಯಾವುದೇ ಖಾಲಿ ಸ್ಥಾನವನ್ನು ತುಂಬಿದುದರ ಕಾರಣದಿಂದಾಗಿ ಅಥವಾ ಇತರ ಯಾವುದೇ ಕಾರಣದಿಂದಾಗಿ ಆಯೋಗದ ರಚನೆಯಲ್ಲಿ ಬದಲಾವಣೆಯುಂಟಾದರೆ, ಆಯೋಗವು ವಿಚಾರಣೆಯನ್ನು ಹೊಸದಾಗಿ ಪ್ರಾರಂಭಿಸುವುದು ಆವಶ್ಯಕವಿರತಕ್ಕುದಲ್ಲ ಮತ್ತು ಬದಲಾವಣೆಯುಂಟಾದ ಹಂತದಿಂದ ವಿಚಾರಣೆಯನ್ನು ಮುಂದುವರಿಸಬಹುದು.

8ಖ. ಪ್ರತಿಕೂಲ ಪರಿಣಾಮ ಉಂಟಾಗುವ ಸಂಭವವಿರುವ ವ್ಯಕ್ತಿಗಳ ಸುನಾವಣಿ.—ವಿಚಾರಣೆಯ ಯಾವುದೇ ಹಂತದಲ್ಲಿ ಆಯೋಗವು:—

(ಕ) ಯಾವನೇ ವ್ಯಕ್ತಿಯು ವರ್ತನೆಯ ಬಗ್ಗೆ ವಿಚಾರಣೆ ನಡೆಸುವುದು ಅವಶ್ಯವೆಂದು ಪರಿಗಣಿಸಿದರೆ; ಅಥವಾ

(ಖ) ವಿಚಾರಣೆಯಿಂದಾಗಿ ಯಾವನೇ ವ್ಯಕ್ತಿಯ ಕೀರ್ತಿಗೆ ಪ್ರತಿಕೂಲ ಪರಿಣಾಮ ಉಂಟಾಗುವ ಸಂಭವವಿದೆಯೆಂದು ಅಭಿಪ್ರಾಯಪಟ್ಟರೆ;

—ಆ ವ್ಯಕ್ತಿಗೆ ವಿಚಾರಣೆಯಲ್ಲಿ ಅಹವಾಲನ್ನು ಹೇಳಿಕೊಳ್ಳಲು ಮತ್ತು ತನ್ನ ಪ್ರತಿ ರಕ್ಷೆಗೆ ಸಾಕ್ಷ್ಯವನ್ನು ಹಾಜರುಪಡಿಸಲು ಯುಕ್ತ ಅವಕಾಶವನ್ನು ಕೊಡತಕ್ಕುದು:

ಪರಂತು, ಸಾಕ್ಷಿಯ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿರುವಲ್ಲಿ, ಈ ಪ್ರಕರಣದಲ್ಲಿರುವ ಯಾವುದೂ ಅನ್ವಯವಾಗತಕ್ಕುದಲ್ಲ.

8ಗ. ಪಾಟಿಸವಾಲಿನ ಮತ್ತು ನ್ಯಾಯವಾದಿಯ ಮೂಲಕ ಪ್ರಾತಿನಿಧ್ಯದ ಹಕ್ಕು.—ಸಮುಚಿತ ಸರ್ಕಾರವು, 8ಖ ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಆಯೋಗದಿಂದ ಯಾರ ಸಾಕ್ಷ್ಯವನ್ನು ದಾಖಲು ಮಾಡಿಕೊಳ್ಳಲಾಗಿದೆಯೋ ಆ ಯಾವನೇ ಇತರ ವ್ಯಕ್ತಿಯು ಆಯೋಗದ ಅನುಮತಿಯೊಡನೆ.—

(ಕ) ಅದು ಅಥವಾ ಅವನು ಹಾಜರುಪಡಿಸಿದ ಸಾಕ್ಷಿದಾರನನ್ನು ಬಿಟ್ಟು ಬೇರೆ ಸಾಕ್ಷಿದಾರನ ಪಾಟೀ ಸವಾಲನ್ನು ಮಾಡಬಹುದು:

(ಖ) ಆಯೋಗವನ್ನು ಸಂಬೋಧಿಸಬಹುದು; ಮತ್ತು

(ಗ) ಆಯೋಗದ ಮುಂದೆ ನ್ಯಾಯವಾದಿಯ ಮೂಲಕ ಅಥವಾ ಆಯೋಗದ ಅನುಮತಿಯೊಡನೆ ಯಾವನೇ ಇತರ ವ್ಯಕ್ತಿಯ ಮೂಲಕ ಪ್ರತಿನಿಧಿಸಬಹುದು.

9. ಸದ್ಭಾವನೆಯಿಂದ ಕೈಗೊಳ್ಳಲಾದ ಕ್ರಮದ ಸಂರಕ್ಷಣೆ.—ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಲಾದ ಯಾವುವೇ ನಿಯಮಗಳ ಅಥವಾ ಆದೇಶಗಳ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಅಥವಾ ಸಮುಚಿತ ಸರ್ಕಾರ ಅಥವಾ ಆಯೋಗದ ಅಧಿಕಾರದ ಮೂಲಕ ಅಥವಾ ಅದರ ಮೇರೆಗೆ ಪ್ರಕಟವಾದ ಯಾವುದೇ ವರದಿ, ಪತ್ರ ಅಥವಾ ವ್ಯವಹರಣೆಗಳ ಬಗ್ಗೆ ಸಮುಚಿತ ಸರ್ಕಾರ, ಆಯೋಗ ಅಥವಾ ಅದರ ಯಾವನೇ ಸದಸ್ಯನ ಅಥವಾ ಸಮುಚಿತ ಸರ್ಕಾರ ಅಥವಾ ಆಯೋಗದ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುವ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯು ನಡೆಯತಕ್ಕುದಲ್ಲ.

10. ಸದಸ್ಯರು ಮೊದಲಾದವರು ಲೋಕ ನೌಕರರಾಗಿರತಕ್ಕುದು:—ಆಯೋಗದ ಪ್ರತಿಯೊಬ್ಬ ಸದಸ್ಯನನ್ನು ಮತ್ತು ಈ ಅಧಿನಿಯಮದ ಮೇರೆಗೆ ಪ್ರಕಾರ್ಯಗಳನ್ನು ಚಲಾಯಿಸಲು ಆಯೋಗದಿಂದ ನೇಮಕಗೊಂಡ ಅಥವಾ ಅಧಿಕೃತನಾದ ಪ್ರತಿಯೊಬ್ಬ ಅಧಿಕಾರಿಯನ್ನು ಭಾರತ ದಂಡ ಸಂಹಿತೆ (1860 ರ 45) ಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರನೆಂದು ಭಾವಿಸತಕ್ಕುದು.

10ಕ. ಆಯೋಗ ಅಥವಾ ಅದರ ಯಾವನೇ ಸದಸ್ಯನಿಗೆ ಅಪಕೀರ್ತಿ ತರಲು ಉದ್ದೇಶಿಸಿದ ಕಾರ್ಯಗಳಿಗೆ ದಂಡ.—(i) ಯಾವನೇ ವ್ಯಕ್ತಿಯು ಆಯೋಗಕ್ಕೆ ಅಥವಾ ಅದರ ಯಾವನೇ ಸದಸ್ಯನಿಗೆ ಅಪಕೀರ್ತಿತರಲು ಉದ್ದೇಶಿಸಿದ ಅಥವಾ ಓದಬೇಕೆಂದು ಉದ್ದೇಶಿಸಲಾದ ಶಬ್ದಗಳಿಂದ ಯಾವುದೇ ಹೇಳಿಕೆಯನ್ನು ಮಾಡಿದರೆ ಅಥವಾ ಪ್ರಕಟಿಸಿದರೆ ಅಥವಾ ಇತರ ಯಾವುದೇ ಕಾರ್ಯವನ್ನು ಮಾಡಿದರೆ ಅವನು ಆರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(2) ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರ 198ಖ ಪ್ರಕರಣದ ಉಪಬಂಧಗಳು.—

(ಕ) ಕೇಂದ್ರ ಸರ್ಕಾರದಿಂದ ನೇಮಕ ಮಾಡಲಾದ ಆಯೋಗದ ಅಥವಾ ಆಯೋಗದ ಸದಸ್ಯನ ಸಂದರ್ಭದಲ್ಲಿ, ಕೇಂದ್ರ ಸರ್ಕಾರದ; ಅಥವಾ

(ಖ) ರಾಜ್ಯ ಸರ್ಕಾರದಿಂದ ನೇಮಕ ಮಾಡಲಾದ ಆಯೋಗದ ಅಥವಾ ಆಯೋಗದ ಸದಸ್ಯನ ಸಂದರ್ಭದಲ್ಲಿ ರಾಜ್ಯ ಸರ್ಕಾರದ;

—ಪೂರ್ವ ಮಂಜೂರಾತಿಯು ಹೊರತು, ಅಂಥ ಅಪರಾಧದ ಬಗ್ಗೆ ಸರ್ಕಾರಿ ಪ್ರಾಸಿಕ್ಯೂಟರನು ಯಾವುದೇ ಫಿರ್ಯಾದನ್ನು ಮಾಡತಕ್ಕುದಲ್ಲವೆಂಬ ಮಾರ್ಪಾಟಿಗೆ ಒಳಪಟ್ಟು, ಅವು ಸದರಿ 198ಖ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲಿಖಿತವಾದ ಅಪರಾಧದ ಸಂಬಂಧದಲ್ಲಿ ಅನ್ವಯಿಸುವಂತೆಯೇ (1)ನೇ ಉಪಪ್ರಕರಣದ ಮೇರೆಗಿನ ಅಪರಾಧದ ಸಂಬಂಧದಲ್ಲಿ ಅನ್ವಯಿಸತಕ್ಕುದು.

11. ಕೆಲವು ಸಂದರ್ಭಗಳಲ್ಲಿ ಇತರ ವಿಚಾರಣಾ ಪ್ರಾಧಿಕಾರಿಗಳಿಗೆ ಅಧಿನಿಯಮದ ಅನ್ವಯ.—3 ನೇ ಪ್ರಕರಣದ ಮೇರೆಗೆ ನೇಮಕ ಮಾಡಲಾದ ಆಯೋಗದ ಹೊರತು, ಸಾರ್ವಜನಿಕ ಮಹತ್ವವುಳ್ಳ ಯಾವುದೇ ನಿಶ್ಚಿತ ವಿಷಯದ ಬಗ್ಗೆ ವಿಚಾರಣೆ ನಡೆಸುವ ಉದ್ದೇಶಕ್ಕಾಗಿ, ಸಮುಚಿತ ಸರ್ಕಾರದ ಯಾವುದೇ ನಿರ್ಣಯ ಅಥವಾ ಆದೇಶದ ಮೇರೆಗೆ ಯಾವುದೇ ಪ್ರಾಧಿಕಾರವನ್ನು (ಅದನ್ನು ಯಾವುದೇ ಹೆಸರಿನಿಂದ ಕರೆಯಲಿ) ರಚಿಸಲಾಗಿದ್ದರೆ, ಅಥವಾ ರಚಿಸಿದರೆ ಮತ್ತು ಆ ಸರ್ಕಾರವು ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉಪಬಂಧಗಳು ಆ ಪ್ರಾಧಿಕಾರಕ್ಕೆ ಅನ್ವಯಿಸುವಂತೆ ಮಾಡಬೇಕೆಂದು ಅಭಿಪ್ರಾಯಪಟ್ಟರೆ, ಆ ಸರ್ಕಾರವು, 3 ನೇ ಪ್ರಕರಣದ (1) ನೇ ಉಪಪ್ರಕರಣದ ಪರಂತುಕದಲ್ಲಿ ಅಡಕವಾಗಿರುವ ನಿಷೇಧಕ್ಕೆ ಒಳಪಟ್ಟು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಸದರಿ ಉಪಬಂಧಗಳು ಆ ಪ್ರಾಧಿಕಾರಕ್ಕೆ ಅನ್ವಯಿಸತಕ್ಕುದೆಂದು ನಿರ್ದೇಶಿಸಬಹುದು ಮತ್ತು ಅಂಥ ಅಧಿಸೂಚನೆಯನ್ನು ಹೊರಡಿಸಿದ ಮೇಲೆ ಆ ಪ್ರಾಧಿಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ 3ನೇ ಪ್ರಕರಣದ ಮೇರೆಗೆ ನೇಮಿತವಾದ ಆಯೋಗವೆಂದು ಭಾವಿಸತಕ್ಕುದು.

12. ನಿಯಮ ರಚನಾಧಿಕಾರ. (1) ಸಮುಚಿತ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು ಎಂದರೆ:—

(ಕ) ಆಯೋಗದ ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು;

(ಖ) ಈ ಅಧಿನಿಯಮದ ಮೇರೆಗೆ ವಿಚಾರಣೆಗಳನ್ನು ನಡೆಸಬಹುದಾದ ರೀತಿ ಮತ್ತು ಆಯೋಗವು ತನ್ನ ಮುಂದಿರುವ ವ್ಯವಹರಣೆಗಳ ಬಗ್ಗೆ ಅನುಸರಿಸಬೇಕಾದ ಪ್ರಕ್ರಿಯೆ;

(ಗ) ಆಯೋಗದಲ್ಲಿ ನಿಹಿತಗೊಳಿಸಬಹುದಾದ ಸಿವಿಲ್ ನ್ಯಾಯಾಲಯದ ಅಧಿಕಾರಗಳು;

(ಘ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಕೇಂದ್ರ ಸರ್ಕಾರವು ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕುದು ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ಅದಕ್ಕೆ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗಿರತಕ್ಕುದಲ್ಲ. ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟು ಮಾಡತಕ್ಕುದಲ್ಲ.

The above translation in Kannada of the Commission of Inquiry Act, 1952 (Act No. 60 of 1952) has been authorised by the President be published in the official Gazette under clause (a) of Section 2 of the Authorised Translations (Central Laws) Act, 1973.

Secretary to Government of India.